# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 390 (386) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಗ್ರಾಮೀಣಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂ.ಬಿ.ಬಿ.ಎಸ್. ವೈದ್ಯಾಧಿಕಾರಿಗಳ ಎದುರು ಹುದ್ದೆಯಲ್ಲಿ ನೇಮಕಾತಿ ಹೊಂದಿ 15 ವರ್ಷಕ್ಕೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿ ಬಿಡುಗಡೆಗೊಂಡು ನಂತರ ಆಯುಷ್ ಇಲಾಖೆಗೆ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಪುನ: ಬಿಡುಗಡೆಗೊಂಡಿದ್ದ ಎಲ್ಲಾ ಆಯುಷ್ ವೈದ್ಯರಿಗೆ ಮರು ಸ್ಥಳ ನಿಯುಕ್ತಿಗೊಳಿಸಲಾಗಿದೆಯೇ; | ಆಯುಷ್ ಇಲಾಖೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗ್ರಾಮೀಣಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂ.ಬಿ.ಬಿ.ಎಸ್. ವೈದ್ಯಾಧಿಕಾರಿಗಳ ಎದುರು ಹುದ್ದೆಯಲ್ಲಿ ನೇಮಕಾತಿ ಹೊಂದಿ 15 ವರ್ಷಕ್ಕೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿ ಬಿಡುಗಡೆಗೊಂಡು ನಂತರ ಈ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಪುನ: ಬಿಡುಗಡೆಗೊಂಡಿರುವ 24 ಆಯುಷ್ ಗುತ್ತಿಗೆ ವೈದ್ಯರುಗಳಲ್ಲಿ 16 ಆಯುಷ್ ಗುತ್ತಿಗೆ ವೈದ್ಯರುಗಳಿಗೆ ಮರು ಸ್ಥಳ ನಿಯುಕ್ತಿಗೊಳಿಸಲಾಗಿದೆ. ಉಳಿದ 08 ಆಯುಷ್ ಗುತ್ತಿಗೆ ವೈದ್ಯರುಗಳಿಗೆ ಬೇರೆ ಜಿಲ್ಲೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಮರುಸ್ಥಳ ನಿಯುಕ್ತಿಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಈ ರೀತಿ ಬಿಡುಗಡೆಗೊಂಡ ಆಯುಷ್ ವೈದ್ಯರ ಸಂಖ್ಯೆ ಎಷ್ಟು; ಮತ್ತು ಅವರುಗಳಲ್ಲಿ ಈಗಾಗಲೇ ಮರು ಸ್ಥಳ ನಿಯುಕ್ತಿಗೊಳಿಸಲಾಗಿರುವ ವೈದ್ಯರ ಸಂಖ್ಯೆ ಎಷ್ಟು: | |

...2

| | | |
|---|---|---|
| ಇ) | ಬಿಡುಗಡೆಗೊಂಡಿದ್ದ ಆಯುಷ್ ವೈದ್ಯರುಗಳಲ್ಲಿ ಇನ್ನೂ ಮರು ಸ್ಥಳ ನಿಯುಕ್ತಿಗೊಳಿಸದೇ ಇರುವ ಆಯುಷ್ ವೈದ್ಯರ ಸಂಖ್ಯೆ ಎಷ್ಟು; ಮತ್ತು ಅದಕ್ಕೆ ಕಾರಣಗಳೇನು; | ಬಿಡುಗಡೆಗೊಂಡಿದ್ದ ಆಯುಷ್ ವೈದ್ಯರುಗಳಲ್ಲಿ ಇನ್ನೂ ಮರು ಸ್ಥಳ ನಿಯುಕ್ತಿಗೊಳಿಸದೇ ಇರುವ ಆಯುಷ್ ವೈದ್ಯರ ಸಂಖ್ಯೆ -08.<br><br>ಸರ್ಕಾರದ ಆದೇಶ ಸಂಖ್ಯೆ; ಆಕುಕ 263 ಪಿಐಎಂ 2021 ದಿನಾಂಕ: 5/01/2022 ರಲ್ಲಿನ ನೇಮಕಾತಿ ಷರತ್ತುಗಳ ಕ್ರಮ ಸಂಖ್ಯೆ 17 ರನ್ವಯ ಗುತ್ತಿಗೆ |
| ಈ) | ಇವರುಗಳನ್ನು ಯಾವ ಕಾಲಮಿತಿಯೊಳಗೆ ಇನ್ನೂ ಮರು ಸ್ಥಳ ನಿಯುಕ್ತಿಗೊಳಿಸದೇ ಇರುವ ಆಯುಷ್ ವೈದ್ಯರನ್ನು ಮರು ಸ್ಥಳ ನಿಯುಕ್ತಿಗೊಳಿಸಲಾಗುವುದು? | ಆಧಾರಿತ ನೇಮಕಾತಿಯು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಖಾಯಂ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳುವವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಹಾಗೂ ಕೌನ್ಸಿಲಿಂಗ್ ಸಂದರ್ಭದಲ್ಲಿ ಸದರಿ ಹುದ್ದೆಗಳನ್ನು ಖಾಲಿ ಹುದ್ದೆಗಳೆಂದು ಪ್ರಚುರಪಡಿಸಿ ಅರ್ಹ ಖಾಯಂ ವೈದ್ಯರು ಸದರಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು. ಈ ಸಂದರ್ಭದಲ್ಲಿ ಕೆಲಸ ಕಳೆದುಕೊಳ್ಳುವ ಗುತ್ತಿಗೆ ಆಯುಷ್ ವೈದ್ಯಾಧಿಕಾರಿಗಳನ್ನು ಅದೇ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೇಮಿಸುವುದು. ಒಂದು ವೇಳೆ ಹುದ್ದೆ ಖಾಲಿಯಿಲ್ಲದಿದ್ದಲ್ಲಿ, ಅವರ ಗುತ್ತಿಗೆ ಸೇವೆಯನ್ನು ಮೊಟಕುಗೊಳಿಸಲಾಗುವುದು ಎಂಬ ಷರತ್ತನ್ನು ವಿಧಿಸಿರುವುದರಿಂದ 08 ಗುತ್ತಿಗೆ ಆಯುಷ್ ವೈದ್ಯರುಗಳು ಬೇರೆ ಜಿಲ್ಲೆಯಲ್ಲಿ ಸ್ಥಳ ನಿಯುಕ್ತಿಗೊಳಿಸಲು ಕೋರಿದ್ದು, ಸದರಿಯವರುಗಳನ್ನು ಮರುಸ್ಥಳ ನಿಯುಕ್ತಿಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಆಕುಕ 99 ಐಎಂಎಂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು